ತುಮಕೂರು ವಿಶ್ವವಿದ್ಯಾನಿಲಯ
ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್.ರಸ್ತೆ, ತುಮಕೂರು-572 103, ☎:0816-2254546 ಫ್ಯಾಕ್ಸ್:0816-2270719

ಸಂಖ್ಯೆ: ತುವಿ: 13ನೇ ಘಟಿಕೋತ್ಸವ : 2019-20: 854 ದಿನಾಂಕ:12.02.2020

# ನೆನಪೋಲೆ

**ವಿಷಯ:** ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಹಾಗೂ ಪಿಎಚ್.ಡಿ. ಪದವಿಗೆ ಅರ್ಹರಾದ ಅಭ್ಯರ್ಥಿಗಳು ಶ್ವೇತ ವರ್ಣ (ಬಿಳಿ ಬಣ್ಣ) ದ ಖಾದಿ ವಸ್ತ್ರವನ್ನು ಧರಿಸುವ ಕುರಿತು.

**ಉಲ್ಲೇಖ:** 1. ಸಂಖ್ಯೆ: ತುವಿ: 13ನೇ ಘಟಿಕೋತ್ಸವ : 2019-20/752: ದಿನಾಂಕ:20.01.2020

2. ಮಾನ್ಯ ಕುಲಪತಿಯವರ ಅನುಮೋದನೆಯ ದಿನಾಂಕ: 18.01.2020
3. D.O.No. 3-2/2013(CPP-II) ದಿನಾಂಕ:21.10.2019
4. ಸಂಖ್ಯೆ: ತುವಿ: 13ನೇ ಘಟಿಕೋತ್ಸವ : 2019-20/770: ದಿನಾಂಕ:27.01.2020

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ತುಮಕೂರು ವಿಶ್ವವಿದ್ಯಾನಿಲಯದ ಹದಿಮೂರನೇ ವಾರ್ಷಿಕ ಘಟಿಕೋತ್ಸವ ದಲ್ಲಿ ವಿವಿಧ ಸ್ನಾತಕ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಹಾಗೂ ಪಿಎಚ್.ಡಿ. ಪದವಿಗೆ ಅರ್ಹರಾದ ಅಭ್ಯರ್ಥಿಗಳು 2020ರ ಫೆಬ್ರವರಿ ಮಾಹೆಯಲ್ಲಿ ನಡೆಯಲಿರುವ ಘಟಿಕೋತ್ಸವ ಸಮಾರಂಭದಂದು ಕಡ್ಡಾಯವಾಗಿ ಶ್ವೇತ ವರ್ಣ (ಬಿಳಿ ಬಣ್ಣ) ದ ವಸ್ತ್ರವನ್ನು ಧರಿಸಿಕೊಂಡು ಬರುವಂತೆ ಉಲ್ಲೇಖ (1) ರ ಪತ್ರದಲ್ಲಿ ಸೂಚಿಸಲಾಗಿತ್ತು. ಮುಂದುವರಿದಂತೆ ಉಲ್ಲೇಖಿತ ಪತ್ರ (03) ಅನ್ವಯ **ದಿನಾಂಕ: 21.10.2019 ರ ಯು.ಜಿ.ಸಿ.** ಪತ್ರದ ಮಾರ್ಗಸೂಚಿಯಂತೆ (D.O.No. 3-2/2013(CPP-II) **ಶ್ವೇತ ವರ್ಣ (ಬಿಳಿ ಬಣ್ಣ) ದ ಖಾದಿ ವಸ್ತ್ರವನ್ನು** ಧರಿಸುವಂತೆ ತಮ್ಮ ಕಾಲೇಜು ಮತ್ತು ವಿಭಾಗಗಳ ವಿದ್ಯಾರ್ಥಿಗಳು ಮತ್ತು ಸಂಬಂಧಿಸಿದ ಸಂಶೋಧನಾರ್ಥಿಗಳಿಗೆ ತಿಳಿಸಲು ಈ ಮೂಲಕ ಸೂಚಿಸಲಾಗಿದೆ. ಈ ಬಗ್ಗೆ ಉಲ್ಲೇಖ (4) ರ ಪರಿಷ್ಕೃತ ಸುತ್ತೋಲೆಯಲ್ಲಿ ಈಗಾಗಲೇ ತಿಳಿಸಲಾಗಿದ್ದು, ಮತ್ತೊಮ್ಮೆ ನೆನಪಿಸುತ್ತಾ **ದಿನಾಂಕ: 25.02.2020 ರಂದು ನಡೆಯುವ ಹದಿಮೂರನೇ ವಾರ್ಷಿಕ ಘಟಿಕೋತ್ಸವ ಸಮಾರಂಭಕ್ಕೆ ಕಡ್ಡಾಯವಾಗಿ ಶ್ವೇತ ವರ್ಣ (ಬಿಳಿ ಬಣ್ಣ) ದ ಖಾದಿ ವಸ್ತ್ರವನ್ನು ಧರಿಸಿ ಕಾರ್ಯಕ್ರಮಕ್ಕೆ ಹಾಜರಾಗುವಂತೆ ತಿಳಿಸಲು ಸೂಚಿಸಲಾಗಿದೆ.**

ಉಲ್ಲೇಖ (3) ರ ಪತ್ರವನ್ನು ಈ ಪತ್ರದೊಂದಿಗೆ ಲಗತ್ತಿಸಿದ್ದು, ಪತ್ರದನ್ವಯ ಕ್ರಮಕೈಗೊಳ್ಳಲು ಸೂಚಿಸಿದೆ.

ಆದೇಶದ ಮೇರೆಗೆ

12/02/2020

ಕುಲಸಚಿವ (ಪರೀಕ್ಷಾಂಗ)

ಗೆ,.

1. ಎಲ್ಲಾ ಮುಖ್ಯಸ್ಥರು/ ಸಂಯೋಜಕರು/ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
2. ಸಂಬಂಧಿಸಿದ ಸಂಶೋಧನಾ ಕೇಂದ್ರಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಸಂಬಂಧಿಸಿದ ಸಂಶೋಧನಾರ್ಥಿಗಳ ಮಾರ್ಗದರ್ಶಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರತಿಗಳು:**

1. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು. (ಜಾಲತಾಣದಲ್ಲಿ ಇಂದೇ ಪ್ರಕಟಿಸುವುದು)
2. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
3. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು
4. ಡಿ.ಲಿಟ್. ಪದವಿಗೆ ಅರ್ಹರಾದ ಅಭ್ಯರ್ಥಿಗಳು.
5. ಪಿಎಚ್.ಡಿ. ಪದವಿಗೆ ಅರ್ಹರಾದ ಅಭ್ಯರ್ಥಿಗಳು, ರ್‍ಯಾಂಕ್ ಪಡೆದ ವಿದ್ಯಾರ್ಥಿಗಳು ಮತ್ತು ಪದಕ ಪಡೆದ ಅರ್ಹ ವಿದ್ಯಾರ್ಥಿಗಳು.